ಆ) ಹಾಗಿದ್ದಲ್ಲಿ, ಉದ್ಯಾನವನಕ್ಕಾಗಿ ಸ್ಥಳ ಗುರುತಿಸಲಾಗಿದೆಯೇ; ಯಾವ ಬಡಾವಣೆಯಲ್ಲಿ ಗುರುತಿಸಲಾಗಿದೆ; ಅದರ ರೂಪುರೇಷೆಗಳೇನು;

ಇ) ಉದ್ಯಾನವನವನ್ನು ನಿರ್ಮಿಸಲು ಎಂದಿನಿಂದ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು;

ಈ) ಉದ್ಯಾನವನ ನಿರ್ಮಾಣಕ್ಕಾಗಿ ಸರ್ಕಾರವು ನೀಡುವ ಅನುದಾನದ ಮೊತ್ತವೆಷ್ಟು?

ಶ್ರೀ ಬಾಲಚಂದ್ರ ಜಾರಕಿ ಹೊಳಿ (ಪೌರಾಡಳಿತ, ಸ್ಥಳೀಯ ಸಂಸ್ಥೆಗಳ ಮತ್ತು ಸಾರ್ವಜನಿಕ ಉದ್ಯಮಗಳ ಸಚಿವರು) :

ಅ) ಹೌದು.

ಆ) ಗುರುತಿಸಲಾಗಿದೆ. ಈಶ್ವರ ದೇವಸ್ಥಾನದ ಉದ್ಯಾನವನ, ಗವೀಶ್ರೀ ನಗರ ಉದ್ಯಾನವನ ಮತ್ತು ಶ್ರೀ ಬಿ.ಟಿ.ಪಾಟೀಲ್ ನಗರ ಉದ್ಯಾನವನ. ಉದ್ಯಾನವನದ ಸುತ್ತಲೂ ಚೈನ್, ಲಿಂಕ್ ಫೆನ್ಸಿಂಗ್ ಅಳವಡಿಸುವುದು, ಲ್ಯಾಂಡ್ ಸ್ಕೇಪಿಂಗ್, ದೀಪಗಳು, ಆಸನಗಳು ಇತ್ಯಾದಿಗಳೊಂದಿಗೆ ಅಭಿವೃದ್ಧಿ ಪಡಿಸಲಾಗುವುದು.

ಇ) ಟೆಂಡರ್ ಅನುಮೋದನೆಯಾಗಿದ್ದು ಕಾರ್ಯಾದೇಶ ನೀಡಬೇಕಾಗಿದೆ.

ಈ) ರೂ. 30 ಲಕ್ಷ

ಭ್ರಷ್ಟಾಚಾರ ನಿಯಂತ್ರಣ ಕಾಯಿದೆಯಡಿ ದಾಖಲಾದ ಪ್ರಕರಣಗಳು

147 (21) ಶ್ರೀ. ಕಟಕದೋಂಡ ವಿಠ್ಠಲ ದೋಂಡಿಬಾ (ನಾಗಠಾಣ್) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭ್ರಷ್ಟಾಚಾರ ನಿಯಂತ್ರಣ ಕಾಯಿದೆ 1988 ರ ಅಡಿಯಲ್ಲಿ ದಾಖಲಾದ ಪ್ರಕರಣ ತನಿಖೆಯನ್ನು ಎಷ್ಟು ದಿನಗಳೊಳಗೆ ಅಂತಿಮಗೊಳಿಸಬೇಕಾಗುತ್ತದೆ.

ಆ) ಭ್ರಷ್ಟಾಚಾರ ನಿಯಂತ್ರಣ ಕಾಯಿದೆ 1988 ರ ಅಡಿಯಲ್ಲಿ ದಾಳಿಗೀಡಾದ ಅಧಿಕಾರಿಗೆ ತನಿಖೆಯ ಪ್ರಾರಂಭದಲ್ಲಿಯೇ 1 ರಿಂದ 16ಬಿ ಹಾಗೂ 17 ರಿಂದ 23 ರ ಖಾಲಿ ನಮೂನೆಗಳನ್ನು (ಷೆಡ್ಯೂಲ್‌ಗಳನ್ನು) ಕೊಡುವುದು ಸರಿಯೇ;

ಇ) ಹಾಗಿದ್ದಲ್ಲಿ, ಯಾವ ಕಾನೂನಿನ ಪ್ರಕಾರ ಈ ಷೆಡ್ಯೂಲ್‌ಗಳನ್ನು ತೆಗೆದುಕೊಳ್ಳಲಾಗುತ್ತದೆ.

ಈ) ಭ್ರಷ್ಟಾಚಾರ ನಿಯಂತ್ರಣ ಕಾಯಿದೆ 1988 ರ ಅಡಿಯಲ್ಲಿ ತನಿಖೆಯ ಅಂತ್ಯದಲ್ಲಿ ಅಧಿಕಾರಿಗಳು ಆದಾಯ ಮೀರಿ ಆಸ್ತಿಗಳನ್ನು ಹೊಂದಿದ್ದು ಕಂಡು ಬಂದಲ್ಲಿ, ಆ ಆಪಾದಿತ ಅಧಿಕಾರಿಗೆ ಭ್ರಷ್ಟಾಚಾರ ನಿಯಂತ್ರಣ ಕಾಯಿದೆ 1988 ಕಲಂ 13(1)(ಇ) ಪ್ರಕಾರ ತನಿಖೆಯಿಂದ ತಿಳಿದು ಬಂದ ಆದಾಯ ಮೀರಿದ ಆಸ್ತಿಗಳ ಪಟ್ಟಿ ಕೊಟ್ಟು, ಆ ಅಧಿಕಾರಿಯಿಂದ ಅಂತಹ ಆಸ್ತಿ ಬಗ್ಗೆ ಸಮಂಜಸ ಉತ್ತರವನ್ನು ತೆಗೆದು ಕೊಳ್ಳಲಾಗಿದೆಯೇ?

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಯವರು) :

ಅ) ಈ ಕಾಯ್ದೆಯಲ್ಲಿ ಅವಧಿಯನ್ನು ನಿಗದಿಗೊಳಿಸಿರುವುದಿಲ್ಲ.

ಆ) ಷೆಡ್ಯೂಲ್ ಕೊಡುವುದು ಸರಿ ಇರುತ್ತದೆ.

ದಾಳಿಗೀಡಾದ ಅಧಿಕಾರಿ ನಮೂನೆಯಲ್ಲಿ ವಿವರಣೆಯನ್ನು ಶೀಘ್ರವಾಗಿ ಕೊಟ್ಟಲ್ಲಿ ತನಿಖೆಯನ್ನು ಶೀಘ್ರವಾಗಿ ಪೂರೈಸಲು ಸಾಧ್ಯವಾಗುತ್ತದೆ.

ಇ) ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ 1988 ಕಲಂ 13(1)(ಇ) ರನ್ವಯ ದಾಳಿಗೀಡಾದ ಅಧಿಕಾರಿಯ ವಿವರಣೆಯು ಅನಿವಾರ್ಯವಾಗಿರುತ್ತದೆ. ಈ ವಿವರಣೆ ಪಡೆಯಲು ಷೆಡ್ಯೂಲ್ ತಯಾರು ಮಾಡಲಾಗಿದೆ.

ಈ) ಷೆಡ್ಯೂಲ್ ಪ್ರಕಾರ ಆಪಾದಿತರು ಸಲ್ಲಿಸಿದ ವಿವರಣೆ ಪರಿಶೀಲಿಸಿ ಈ ಬಗ್ಗೆ ತನಿಖೆ ಕೈಗೊಂಡು ತನಿಖೆ ಪೂರೈಸಲಾಗುತ್ತದೆ. ತನಿಖೆ ಮುಗಿದ ನಂತರ ಆಸ್ತಿಯ ಪಟ್ಟಿಯನ್ನು ದಾಳಿಗೀಡಾದ ಅಧಿಕಾರಿಗೆ ಕೊಡಲಾಗುವುದಿಲ್ಲ. ಈ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗುತ್ತದೆ. ನ್ಯಾಯಾಲಯವು ಆಪಾದನೆಯ ಪಟ್ಟಿಯನ್ನು ಅಂಗೀಕರಿಸಿದ ನಂತರ ಇದರ ಒಂದು ಪ್ರತಿಯನ್ನು ದಾಳಿಗೊಳಗಾದ ಅಧಿಕಾರಿಗೆ ಕೊಡುತ್ತದೆ.